# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 692 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21/08/2026 |
| ಉತ್ತರಿಸುವ ಸಚಿವರು | ಅಲ್ಪ ಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರಮ ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಟ್ರಯಲ್ ಹಗರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಯಾವ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಟ್ರಯಲ್ ಹಗರಣ ನಡೆದಿದೆ; ಹಗರಣದ ಸ್ವರೂಪ ಏನು; | ಕ್ಲಿನಿಕಲ್ ಟ್ರಯಲ್‌ಗಳಿಗೆ ಸಂಬಂಧಿಸಿದ ವಿಷಯ ಮತ್ತು ನಿಯಂತ್ರಣವು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಆಡಳಿತ (CDSCO)ರವರ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. |
| ಆ. | ಹೆಚ್.ಸಿ.ಜಿ. ಆಸ್ಪತ್ರೆಯಲ್ಲಿ ನಡೆದಿರುವ ಅಕ್ರಮಗಳು ಯಾವುವು; ಅಕ್ರಮಗಳ ಕುರಿತು ತನಿಖೆ ಆಗಿದೆಯೇ; ತನಿಖೆಯಲ್ಲಿ ಕಂಡುಬಂದಿರುವ ಅಂಶಗಳೇನು; ಆರೋಪಗಳು ಸಾಬೀತಾಗಿವೆಯೇ; | " ಕ್ಲಿನಿಕಲ್ ಟ್ರಯಲ್ ಚಟುವಟಿಕೆಗಳಲ್ಲಿ ಹೆಚ್.ಸಿ.ಜಿ ಆಸ್ಪತ್ರೆ ಹಗರಣ ರೀತಿಯ ನೀತಿಬಾಹಿರ ಕೃತ್ಯಗಳಲ್ಲಿ ತೊಡಗಿರುವ ಬಗ್ಗೆ South First Digital publication ವರದಿ ಪ್ರಕಟವಾದ ಮೇರೆಗೆ CDSCO New Delhi ರವರು ಸದರಿ ವಿಷಯದ ಕುರಿತು ತನಿಖೆಕೈಗೊಳ್ಳುವ ನಿಟ್ಟಿನಲ್ಲಿ ತನಿಖಾ ತಂಡವನ್ನು ರಚಿಸಿ, ತನಿಖೆಯನ್ನು ಕೈಗೊಂಡು ವರದಿಯನ್ನು ಕೇಂದ್ರದ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ ರವರಿಗೆ NDCT ರವರಿಗೆ NDCT ನಿಯಮಗಳು 2019ರ ನಿಯಮ 30 ಪ್ರಕಾರ ಸಂಸ್ಥೆಯ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ CDSCO ನವದೆಹಲಿ ಇವರನ್ನು ಕೋರಲಾಗಿತ್ತು.<br><br>ಆ ಕೋರಿಕೆಯ ಮೇರೆಗೆ ಸದರಿ ಸಂಸ್ಥೆಯ ವಿರುದ್ಧ Drugs Controller General of India, CDSCO New Delhi ರವರು ಕ್ರಮವನ್ನು ಕೈಗೊಳ್ಳಲು ದಿನಾಂಕ: 17.07.2025 Show Cause Notice ನೀಡಿರುತ್ತಾರೆ. ದಿನಾಂಕ:12.09.2025ರಂದು ಸದರಿ ಸಂಸ್ಥೆಯಲ್ಲಿ ವಿಚಾರಣೆ ನಡೆಸಿರುತ್ತಾರೆ. |
| ಇ. | ಹೆಚ್.ಸಿ.ಜಿ. ಆಸ್ಪತ್ರೆ ವಿರುದ್ಧ ಕೈಗೊಂಡಿರುವ ಕ್ರಮಗಳೇನು; ಸದರಿ ಆಸ್ಪತ್ರೆಯು ಈವರೆಗೆ ಮರೆಮಾಚಲಾಗಿರುವ ಸಾವಿನ ಮತ್ತು ತೀವ್ರ ಅನಾರೋಗ್ಯ ವರದಿಗಳನ್ನು ಸಲ್ಲಿಸಿದೆಯೇ; | Drugs Controller General of India, CDSCO New Delhi ದಿನಾಂಕ:12.06.2026 ರಿಂದ 24 ತಿಂಗಳು ಹೆಚ್.ಸಿ.ಜಿ ಆಸ್ಪತ್ರೆಯ ಸದರಿ ಕ್ಲಿನಿಕಲ್ ಟ್ರಯಲ್ ಪರವಾನಿಗೆಯನ್ನು ಅಮಾನತ್ತುಗೊಳಿಸಿ ದಿನಾಂಕ: 12.06.2026ರಂದು ಆದೇಶ ಹೊರಡಿಸಿ ಆಸ್ಪತ್ರೆ ವಿರುದ್ಧ ಕ್ರಮಕೈಗೊಂಡಿರುತ್ತಾರೆ. |

| | | |
|---|---|---|
| ಉ. | ಹೆಚ್.ಸಿ.ಜಿ. ಹೊರತು ಪಡಿಸಿ ಇತರೆ ಯಾವುದಾದರೂ ಆಸ್ಪತ್ರೆಯಲ್ಲಿ ಈ ರೀತಿಯ ಹಗರಣ ನಡೆದಿರುವ ಕುರಿತು ಪರಿಶೀಲನೆ ನಡೆದಿದೆಯೇ; ಇದರ ಅಗತ್ಯತೆ ಇರುವುದರಿಂದ ಪರಿಶೀಲನೆ ನಡೆಸಲು ಸರ್ಕಾರ ಕ್ರಮಕೈಗೊಳ್ಳಲಿದೆಯೇ? | ಭಾರತದಲ್ಲಿ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (DCGI) ಅಡಿಯಲ್ಲಿ ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಜೇಶನ್ (CDSCO), ಸ್ವತಂತ್ರ ನೈತಿಕ ಸಮಿತಿಗಳು ಮತ್ತು ಆನ್-ಸೈಟ್ ಡೇಟಾ ಮತ್ತು ಸುರಕ್ಷತಾ ಪರಿಶೀಲನೆಗಳಿಗಾಗಿ ಕ್ಲಿನಿಕಲ್ ರಿಸರ್ಚ್ ಅಸೋಸಿಯೇಟ್‌ಗಳನ್ನು (CRAs) ನೇಮಿಸಿಕೊಳ್ಳುವ ಪ್ರಯೋಗ ಪ್ರಾಯೋಜಕರು (ಅಥವಾ ಕಾಂಟ್ರಾಕ್ಟ್ ರಿಸರ್ಚ್ ಆರ್ಗನೈಸೇಶನ್‌ಗಳು) ಕ್ಲಿನಿಕಲ್ ಪ್ರಯೋಗಗಳನ್ನು ಬಹು ಹಂತಗಳಲ್ಲಿ ಮೇಲ್ವಿಚಾರಣೆಗೆ ಒಳಪಡಿಸಲಾಗುತ್ತಿದೆ. |

**ಸಂಖ್ಯೆ: ಆಕುಕ 234 ಪಿಟಿಡಿ 2026**

**(ಯು.ಟಿ. ಖಾದರ್ ಫರೀದ್)**
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತುವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು